**ಸಾಕ್ಷಿಯನ್ನು ದಿನಾಂಕಃ 04.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ. ಎ.ಟಿ.ಕೆ. ವಕೀಲರಿಂದಃ**

ಆರೋಪಿ ಹಾಗು ನಾನು ಒಂದೇ ಊರಿನವರು ಹಾಗು ಒಂದೇ ಜನಾಂಗದವರು. ಅವರು ನನ್ನ ಸಂಬಂಧಿಕರಲ್ಲ. ಪಿರ್ಯಾದುದಾರರ ತಂದೆಯಾದ ಲೇಟ್ ಹೆಚ್.ಕೆ. ಮಾದೇಗೌಡರವರು ಕಾವಲೇ ಗ್ರಾಮದವರು. ಸದರಿ ಮಾದೇಗೌಡರು ದೇಶವ್ಯಾಪಿ ಕರೋನಾ ಖಾಯಿಲೆ ಬಂದ ಸಮಯದಲ್ಲಿ ಮೃತಪಟ್ಟಿರುತ್ತಾರೆ. ಸದರಿ ಮಾದೇಗೌಡರವರ ಹೆಂಡತಿ ಹಾಗು ಅವರ ಮಗಳಾದ ಪಿರ್ಯಾದುದಾರರ ಪರಿಚಯವಿರುತ್ತದೆ. ಸಾಕ್ಷಿ ಮುಂದುವರೆದು ಮಾದೇಗೌಡರವರು ಹೆಚ್ಚಾಗಿ ಪರಿಚಿತರಿದ್ದರು ಎಂದು ನುಡಿಯುತ್ತಾರೆ. ಸದರಿ ಮಾದೇಗೌಡರವರ ಮಗಳಾದ ಪಿರ್ಯಾದಿಯನ್ನು ನಾನು ನೋಡಿರುತ್ತೇನೆ. ಈ ಪ್ರಕರಣವನ್ನು ಯಾರು ಯಾರ ವಿರುದ್ಧ ಎಷ್ಟು ಮೊತ್ತಕ್ಕೆ ಹೂಡಿರುತ್ತಾರೆಂದು ನನಗೆ ಗೊತ್ತಿರುತ್ತದೆ. ಸಾಕ್ಷಿ ಮುಂದುವರೆದು ಆರೋಪಿ ಮಹದೇವಪ್ಪರವರೇ ತಿಳಿಸಿರುತ್ತಾರೆಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಸುಮಾರು 06 ತಿಂಗಳ ಈಚೆಗೆ ತಿಳಿಸಿರುತ್ತಾರೆ. ಪಿರ್ಯಾದಿಯ ತಂದೆಯಾದ ಮಾದೇಗೌಡರ ಜೊತೆ ನಾನು ಯಾವುದೇ ಹಣಕಾಸಿನ ವ್ಯವಹಾರ ಮಾಡಿರಲಿಲ್ಲ. ಆರೋಪಿಯು ಸದರಿ ಮಾದೇಗೌಡರ ಜೊತೆ ಹಿಂದೆ ಬೇರೆ ಹಣಕಾಸಿನ ವ್ಯವಹಾರ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿಯು ಮಾದೇಗೌಡರಿಂದ 2017 ನೇ ಇಸವಿಯಲ್ಲಿ ರೂ. 50,000/- ಸಾಲ ಪಡೆದಿದ್ದು ಅದಕ್ಕೆ ಆರೋಪಿಯು ಮಾದೇಗೌಡರಿಗೆ ಚೆಕ್ ನೀಡಿದ್ದರು. ಸದರಿ ಚೆಕ್ ನ ನಂಬರ್ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಅದು ಆರೋಪಿಯ ಹುಣಸೂರು ಸ್ಟೇಟ್ ಬ್ಯಾಂಕ್ ನ ಚೆಕ್ ಆಗಿರುತ್ತದೆಂದು ನುಡಿಯುತ್ತಾರೆ. ಆರೋಪಿಯು ಯಾವ ವರ್ಷ, ತಿಂಗಳು ಮಾದೇಗೌಡರಿಗೆ ಸದರಿ ಹಣವನ್ನು ಹಿಂತಿರುಗಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಯು ಹಣವನ್ನು ಹಿಂತಿರುಗಿಸಿದ ನಂತರ ಮಾದೇಗೌಡರು ಸದರಿ ಚೆಕ್ ತನ್ನ ಹೆಂಡತಿಯ ಬಳಿ

ಇರುವುದಾಗಿ ಹಾಗು 04-05 ದಿನಗಳ ನಂತರ ತಾನೇ ಖುದ್ದಾಗಿ ಬಂದು ಹಿಂತಿರುಗಿಸಿರುತ್ತೇನೆಂದು ಹೇಳಿದ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೊರತುಪಡಿಸಿ ಹಿಂದೆ ಎಲ್ಲೂ ಯಾರ ಮುಂದೆಯೂ ಹೇಳಿರುವುದಿಲ್ಲ. ಸದರಿ ಮಾದೇಗೌಡರು ತೀರಿಹೋದ ನಂತರ ನಾನು ಹಾಗು ಆರೋಪಿ ಸದರಿ ಮಾದೇಗೌಡರ ಮನೆಗೆ ಹೋಗಿ ಅವರ ಹೆಂಡತಿಯಲ್ಲಿ ಚೆಕ್ ಅನ್ನು ಹಿಂತಿರುಗಿಸುವಂತೆ ಕೇಳಿರುವುದಿಲ್ಲ. ಪಿರ್ಯಾದಿಯು ಆರೋಪಿಯ ವಿರುದ್ಧ ಈ ಪ್ರಕರಣವನ್ನು ಹೂಡಿದ ನಂತರ ನಾನು ಹಾಗು ಆರೋಪಿ ಪೋಲೀಸ್ ಠಾಣೆ ಅಥವಾ ಬೇರೆ ಕಡೆ ಹೋಗಿ ಪಿರ್ಯಾದಿ ಚೆಕ್ ಅನ್ನು ದುರ್ಬಳಕೆ ಮಾಡಿಕೊಂಡ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿ ಯಾವುದೇ ದೂರನ್ನು ನೀಡಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಆರೋಪಿ ಹಾಗು ಮಾದೇಗೌಡರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಹಾಗು ಆರೋಪಿಯು ಸದರಿ ಮಾದೇಗೌಡರಿಗೆ ಭದ್ರತೆಗಾಗಿ ಯಾವುದೇ ಚೆಕ್ ಅನ್ನು ನೀಡಿರುವುದಿಲ್ಲವೆಂದರೆ ಸರಿಯಲ್ಲ. ಆರೋಪಿಯು ಪಿರ್ಯಾದಿಯಿಂದ ರೂ. 2,00,000/- ಸಾಲ ಪಡೆದು ಅದನ್ನು ತೀರಿಸುವ ಸಲುವಾಗಿ ಪಿರ್ಯಾದಿಗೆ ನಿ.ಪಿ.-1 ಚೆಕ್ ಅನ್ನು ನೀಡಿರುತ್ತಾರೆಂದರೆ ಸಾಕ್ಷಿಯು ಆ ವಿಚಾರ ನನಗೆ ಗೊತ್ತಿರುವುದಿಲ್ಲ, ಆರೋಪಿ ಹಾಗು ಮಾದೇಗೌಡರ ನಡುವೆ ನಡೆದ ವ್ಯವಹಾರ ಮಾತ್ರ ಗೊತ್ತಿರುತ್ತದೆಂದು ನುಡಿಯುತ್ತಾರೆ. ನಾನು ಹಾಗು ಆರೋಪಿಯು ಒಂದೇ ಊರಿನವರಾಗಿದ್ದು ಮತ್ತು ಒಂದೇ ಜನಾಂಗದವರಾಗಿರುವುದರಿಂದ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಅವರು ತಿಳಿಸಿದ ಸುಳ್ಳು ವಿಚಾರವನ್ನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯದ ಮೂಲಕ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**